(*d*) whether the Government is considering to increase the strength oi Police Force of Savanur Police Station ;

(*e*) if so, the steps the Government has taken in the matter ?

Sri H. M. CHANNABASAPPA (Minister for Public Works) [On behalf of SRI D. DEVARAJ URS (Chief Minister)].—

(*a*) Number of Villages 23

Staff:

1.	Chief Police Officer	1
2.	Sub Inspectors	2
3.	Grade I Jamadars	2
4.	Head Constables	10
5.	Police Constables	50

(*b*) 41.

(*c*) The question of adding 26 more villages to the existing Police Station is under examination.

(*d*) No.

(*e*) Does not arise in view of reply to Clause (*d*) above.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ತಾವು ಯಾವ ಆಧಾರದ ಮೇಲೆ ಪ್ರತಿಯೊಂದು ಪೋಲೀಸ್ ಸ್ಟೇಷನ್ನಲ್ಲೂ ಇಷ್ಟೇ ಹೇದೆಗಳು ಇರಬೇಕು ಎಂದು ನಿರ್ಧರಿಸುತ್ತೀರಿ ?

†Sri H. M. CHANNABASAPPA.—Incidence of crimes.

ಶ್ರೀ ಎಂ. ಎಂ. ನಡಾಫ್.—ಸ್ವಾಮಿ, ಸವಣೂರು ಪೋಲೀಸ್ ಸ್ಟೇಷನ್ ಸ್ಟೇಟ್‌ಗೆ ಮರ್ಜ್ ಆದಾಗ 1947ನೇ ಇಸವಿಯಲ್ಲಿ ಇಪ್ಪತ್ತೊರು ಹಳ್ಳಿಗಳು ಇದ್ದವು. ಇದಕ್ಕೆ ಇಬ್ಬರು ಸಬ್ ಇನ್‌ಸ್ಪೆಕ್ಟರ್ಸ್ ಇದ್ದರು ಎಂದು ಹೇಳಿದ್ದೀರಿ, ಸಾಮಾನ್ಯವಾಗಿ ನಲವತ್ತೊಂದು ಹಳ್ಳಿಗಳಿವೆ, ಎಂದು ಹೇಳಿದ್ದೀರಿ, ಈಗ ಇಪ್ಪತ್ತು ವರ್ಷದಲ್ಲಿ ಆಪಾರವಾದ ಜನಸಂಖ್ಯೆ ಬೆಳೆದಿದೆ, ಕ್ರೈಮ್ ಹೆಚ್ಚಾಗಿದೆ, ಇದನ್ನು ಕಂಡು ಪೋಲೀಸ್ ಪೇದೆಗಳನ್ನು ಹೆಚ್ಚು ಮಾಡಲಿಕ್ಕೆ ಆಲೋಚನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ಯೋಜನೆ ಸರ್ಕಾರದ ಮುಂದೆ ಇಲ್ಲ.

City Library at Davangere

190 Smt. NAGAMMA KESHAVAMURTHY (Davangere)—

Will the Minister for Education be pleased to state :—

(*a*) the total amount that is being collected as Library Cess in the State (Districtwise figures may be given) ;

(*b*) the number of District and City Libraries now being run in the State ;

(*c*) the criteria adopted for the establishment of City Libraries ;

(*d*) the number of City Libraries established during the last 2 years in the State;

(*e*) whether there is any proposal to open a City Library at Davangere and if so within what period ?

Sri M. MALLIKARJUNSWAMY (Minister for Education)—

(*a*) *Vide* Statement 'A' appended.

(*b*) (i) City Central Libraries—5

(ii) District Central Libraries—13

(*c*) As per the provisions of Section 16 (a) of the Karnataka Public Library Act 1965, a City Library may be established in an urban area having a population of more than one lakh.

(*d*) One.

(*e*) Yes. The proposal is being examined.

STATEMENT

The Statement showing the total amount that is being collected as Library cess in the State Districtwise during 1973-74

Sl. No.	Name of the District	The amount of Library cess collected
		Rs.
1	Coorg District, Mercara	5,000-00
2	Bellary	70,000-00
3	Hassan	32,108-00
4	Chitradurga	34,806-00
5	South Kanara, Mangalore	1,60,000-00
6	Kolar Chintamani	31,000-00
7	Tumkur	10,000-00
8	Chikkamagalur	16,000-00
9	Shimoga	42,230-00
10	Gulbarga	41,223-00
11	Belgaum	60,000-00
12	Bangalore	47,750-00
13	Dharwar	44,858-00
14	Bijapur	40,564-00
Urban area where City Central libraries are functioning		
1	Bangalore	13,2 ,642-00
2	Mysore	4,87,090-00
3	Hubli-Dharwar	3,18,000-00
4	Mangalore	1,50,100-00
5	Belgaum	3,19,121-00

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಸ್ವಾಮಿ, ತಮ್ಮ ಉತ್ತರವ ಪ್ರಕಾರ ಒಂದು ಲಕ್ಷಕ್ಕೆ ಮೇಲೆ ಇರತಕ್ಕ ಅರ್ಬನ್ ಏರಿಯಾಸ್‌ನಲ್ಲಿ ಸಿಟಿ ಲೈಬ್ರರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದ್ದೀರಿ, ನಾಲ್ಕಾರು ವರ್ಷದಿಂದ ಜನತೆ ಅಭಿವೃದ್ಧಿಗೆ ಯಾವ ಕಾರ್ಯಗತವಾಗಿಲ್ಲ, ದಾವಣಗೆರೆಯಲ್ಲಿ ಸುಮಾರು ಹತ್ತು ಸಾವಿರಕ್ಕೂ ಹೆಚ್ಚಾಗಿ ಸ್ಟೂಡೆಂಟ್ ಪಾಪ್ಯುಲೇಷನ್ ಇದೆ, ಹದಿಮೂರು, ಹದಿನಾಲ್ಕು ಕಾಲೇಜುಗಳು ಇವೆ, ಈ ದೃಷ್ಟಿಯಿಂದ ದಾವಣಗೆರೆಯಲ್ಲಿ ಅದಷ್ಟು ಬೇಗ ಸಿಟಿ ಲೈಬ್ರರಿ ಸ್ಥಾಪನೆ ಮಾಡಲಿಕ್ಕೆ ಸಾಧ್ಯವೇ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಕರ್ನಾಟಕ ಪಬ್ಲಿಕ್ ಲೈಬ್ರರೀಸ್ ಆ್ಯಕ್ಟ್ ಪ್ರಕಾರವಾಗಿ ಲೈಬ್ರರಿ ಎಸ್ಟಾಬ್ಲಿಷ್‌ಮೆಂಟ್ ಮಾಡತಕ್ಕಂಥಾದ್ದು ಹೇಗೆ ಎನ್ನತಕ್ಕದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ. ನಾನು ಹೇಳಿದ್ದೇನೆ it is under examination ಎಂದು. ಇದರ ಜೊತೆಗೆ ನಾವು ಕಾರ್ಪೊರೇಷನ್ ಕಮಿಷನರರಿಗೂ ಕೂಡ ಬರೆದಿದ್ದೇವೆ. ಆ ಕಾರ್ಪೊರೇಷನ್ ಕಮಿಷನರ್ ರವರಿಂದ ಇದುವರೆಗೆ ಕೂಡ ಸರ್ಕಾರಕ್ಕೆ ಉತ್ತರ ದೊರತಿಲ್ಲ. ಅಲ್ಲಿ ಸಂಗ್ರಹ ಆಗತಕ್ಕಂಥಾದ್ದು ಬಿಲ್ಡಿಂಗ್ಸ್ ಮೇಲೆ ಹಾಕತಕ್ಕ ಸರ್‌ಚಾರ್ಜ್ ಏನು ಉತ್ಪತ್ತಿ ಇದೆ, ಮತ್ತು ಇನ್ನು ಕೆಲವು ವಿವರಗಳನ್ನು ಕೇಳಿದ್ದೇವೆ. ಅವರು ಇದುವರೆಗೂ ಏನನ್ನೂ ಒದಗಿಸಿಕೊಟ್ಟಿಲ್ಲ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.—ಈ ವಿಷಯದಲ್ಲಿ ಮುನಿಸಿಪಾಲಿಟಿಯವರು ಜಾಗ ಕೊಡಲಿಕ್ಕೆ ಮತ್ತು ಒಂದು ಬಿಲ್ಡಿಂಗ್ ಸಹ ಕೊಡಲಿಕ್ಕೆ ಮುಂದೆ ಬಂದಿದ್ದಾರೆ. ಈ ದೃಷ್ಟಿಯಿಂದ ರಾದರೂ ಈ ಕಾರ್ಯವನ್ನು ನೆರವೇರಿಸಲಿಕ್ಕೆ ಆಗುತ್ತದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಆ ವಿವರ ಎಲ್ಲಾ ಬಂದರೆ ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಜಿಲ್ಲೆ ಮತ್ತು ನಗರಗಳಲ್ಲಿ ಗ್ರಂಥಾಲಯದ ಬಗ್ಗೆ ಹೇಳಿದ್ದೀರಿ, ಇದೇ ತರಹ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಂಥಾಲಯ ತೆಗೆಯುವಲಿಕ್ಕೆ ಯಾವು ದಾದರೂ ಯೋಜನೆ ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ದಾವಣಗೆರೆಗೆ ಸಂಬಂಧಪಟ್ಟ ಪ್ರಶ್ನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮೊದಲು ರಾಜ್ಯದಲ್ಲಿ ನಗರಗಳ ಜನಸಂಖ್ಯೆ ಎಷ್ಟು ಇತ್ತು? ಶ್ರೀ ಎ.ಸಿ. ದೇವೇಗೌಡರ ಗ್ರಂಥಾಲಯಕ್ಕೆ ಸಂಬಂಧಪಟ್ಟ ಹಾಗೆ ಶಿಫಾರಸ್ಸು ಏನು ಇದೆ, ಅವುಗಳನ್ನು ಗಮನಕ್ಕೆ ತೆಗೆದುಕೊಂಡಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗತಾನೇ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ದೇವೇಗೌಡರ ಶಿಫಾರಸ್ಸು ಇಲ್ಲ, ಯಾವ ಶಿಫಾರಸ್ಸು ಇಲ್ಲ, ಅದನ್ನು ನೋಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ — ಅವರು ಯಾವ ರೀತಿ ನಮ್ಮ ರಾಜ್ಯದಲ್ಲಿ ಗ್ರಂಥಾಲಯಗಳು ಕೆಲಸ ಮಾಡಿವೆ ಎಂದು ರಿಪೋರ್ಟ್ ಕೊಟ್ಟಿದ್ದಾರೆ ಅದು ತಮ್ಮ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಅದು ಯಾವುದೂ ಬಂದಿಲ್ಲ.

ಶ್ರೀ ಸಿ. ಬೈರೇಗೌಡ.—ಸ್ಟೇಟ್‌ಮೆಂಟ್ ಪ್ರಕಾರ ಕೋಲಾರ ಜಿಲ್ಲೆಯಲ್ಲಿ ಮುವತ್ತೊಂದು ಸಾವಿರ ರೂಪಾಯಿ ವಸೂಲ್ಮಾಡಿದ್ದಾರೆ, ವಸೂಲ್ಮಾಡಬೇಕಾದುದು ಎಷ್ಟು ದಯ ವಿಟ್ಟು ತಿಳಿಸಿ. ವಸೂಲಾತಿ ಬಗ್ಗೆ ಸಂಬಂಧಪಟ್ಟವರು ಸರಿಯಾದ ರೀತಿಯಲ್ಲಿ ವಸೂಲು ಮಾಡತ್ತಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಹೇಳಿದ್ದೇವೆ. ಅಲ್ಲದೆ ಸರ್ಕ್ಯುಲರ್ ಇನ್‌ಸ್ಟ್ರಕ್ಷನ್ ಕೊಟ್ಟು ಯಾವ ರೀತಿಯಲ್ಲಿ ವಸೂಲು ಮಾಡಬೇಕು ಎಂದು ಹೇಳಿದ್ದೇವೆ.

ಶ್ರೀ ಸಿ.ಬೈರೇಗೌಡ.— ಈಗ ವಸೂಲು ಆಗಿರುವುದು ಮಾತ್ರ ಕೊಟ್ಟಿದ್ದೀರಿ, ಬರಬೇಕಾಗಿರುವುದು ಎಷ್ಟು ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಬರಬೇಕಾಗಿರುವ ಮಾಹಿತಿ ನನ್ನಲ್ಲಿ ಇಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.